ಸಿಂಧಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆಯ ಕೀಟನಾಶಕ ನಿಯಂತ್ರಣ

4915 - ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆ ಎಷ್ಟು ಎಕರೆ ಇದೆ?

ಆ) ತೊಗರಿ ಬೆಳೆಗಳ ಇಳುವರಿಗೆ ಕೀಟಗಳ ಹಾವಳಿ ಇವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಅದಕ್ಕೆ ಸರ್ಕಾರ ಯಾವ ನಿಟ್ಟಿನಲ್ಲಿ ತಡೆಗಟ್ಟುವ ಕ್ರಮ ಕೈಗೊಂಡಿದೆ, ಇದರ ಸಲುವಾಗಿ ರಿಯಾಯಿತಿ ದರದಲ್ಲಿ ಸರ್ಕಾರ ನೀಡಿದ ಸ್ಪ್ರೇ ಪಂಪ್‌ಗಳು ಎಷ್ಟು ಸದ್ಯಕ್ಕೆ ಅವು ಸಾಕಾಗುತ್ತವೆಯೆ?

ಈ) ಕೀಟಗಳ ನಿಯಂತ್ರಣಕ್ಕಾಗಿ ಹಾಗೂ ಇಳುವರಿಗಾಗಿ ಸರ್ಕಾರ ರಿಯಾಯಿತಿ ದರದಲ್ಲಿ ಕೊಟ್ಟ ಔಷಧ, ಪೌಡರ್ ಹಾಗೂ ಸ್ಪ್ರೇಪಂಪ್‌ಗಳಿಗಾಗಿ ಬಿಡುಗಡೆ ಮಾಡಿದ ಅನುದಾನದಿಂದ ರೋಗ ಹಾಗೂ ಹುಳುಗಳಿಂದ ಬೆಳೆ ಮುಕ್ತಿಯಾಗಿ ಸಮರ್ಪಕವಾಗಿ ಇಳುವರಿ ಬರಲು ಕ್ರಮ ಕೈಗೊಂಡಿದೆಯೆ?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಸಿಂಧಗಿ ತಾಲ್ಲೂಕಿನಲ್ಲಿ ಹಾಲಿ 39835 ಎಕರೆ ತೊಗರಿ ಬೆಳೆ ಬೆಳೆಯಲಾಗಿದೆ.

ಆ) ಬಂದಿದೆ.

ಇ) ತೊಗರಿ ಬೆಳೆಯ ಕೀಟಗಳ ಬಾಧ ತಡೆಗಟ್ಟಲು ರೈತರಿಗೆ ಗುಂಪು ಮುಖಾಂತರ ತರಬೇತಿ ನೀಡಲಾಗಿರುತ್ತದೆ.

ಸಮಗ್ರ ಕೀಟ ಹತೋಟಿ ಕುರಿತು ಕರ ಪತ್ರಗಳನ್ನು ರೈತರಿಗೆ ಹಂಚಲಾಗಿದೆ.

ಆಕಾಶವಾಣಿಯ ಮೂಲಕ ರೈತರಿಗೆ ಸಲಹೆಗಳನ್ನು ಕೊಡಲಾಗಿದೆ.

ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡವನ್ನು ರಚಿಸಿ ಪ್ರತಿ ಗುರುವಾರ ಸಿಂಧಗಿ ತಾಲ್ಲೂಕಿನ ತೊಗರಿ ಬೆಳೆಯ ಸಮೀಕ್ಷೆ ಮಾಡಿ ಸಮಗ್ರ ಕೀಟ ಹತೋಟಿಯ ಕ್ರಮಗಳನ್ನು ರೈತರಿಗೆ ತಿಳಿಸಿದ್ದು ವೃತ್ತ ದಿನ ಪತ್ರಿಕೆಯಲ್ಲಿ ಸಹ ಪ್ರಕಟಿಸಲಾಗಿದೆ. ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿದ್ದ ಪೂರ್ತಿ ಅನುದಾನವನ್ನು ಬಳಸಿಕೊಂಡು 63 ಸಸ್ಯ ಸಂರಕ್ಷಣಾ (ಸ್ಪ್ರೇ.) ಉಪಕರಣಗಳನ್ನು ಶೇ. 50ರ ರಿಯಾಯಿತಿಯಲ್ಲಿ ರೈತರಿಗೆ ವಿತರಿಸಲಾಗಿದೆ.

ಈ) ಕೀಟ ರೋಗ ನಿಯಂತ್ರಣಕ್ಕೆ ಸರ್ಕಾರದಿಂದ ವಿಶೇಷ ನೆರವಾಗಿ ರೂ.0.80 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು ಕೀಟ ನಾಶಕಗಳನ್ನು ರೈತರಿಗೆ ರಿಯಾಯಿತಿ ದರದಲ್ಲಿ ಹಂಚುವ ಕಾರ್ಯ ಪ್ರಗತಿಯಲ್ಲಿದೆ. ಅದೂ ಅಲ್ಲದೆ ಸಮಗ್ರ ಪೀಡೆ ನಿರ್ವಹಣೆ ಕ್ರಮಗಳ ಬಗ್ಗೆ ವಿಶೇಷ ತಂಡ ರೈತರಿಗೆ

ಮಾಹಿತಿ ಸಲ್ಲಿಸುತ್ತದೆ. ಅಲ್ಲದೆ ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆಯ ಸಮಗ್ರ ಪೀಡೆ ನಿರ್ವಹಣೆಯಡಿಯಲ್ಲಿ ಎನ್.ಪಿ.ವಿ. ಹಾಗೂ ಬೇವಿನ ಮೂಲ ಕೀಟನಾಶಕ ಪೂರೈಕೆ ಮಾಡಲಾಗಿದೆ

ಉ) ಪ್ರತಿ ಎಕರೆಗೆ ಅಂದಾಜು ಇಳುವರಿ ಸರಾಸರಿ 3 ರಿಂದ 4 ಕ್ವಿಂಟಾಲ್ ಪಡೆಯ ಬಹುದಾಗಿದೆ.

ಅಂಗನವಾಡಿ ಕೇಂದ್ರಗಳ ಕಟ್ಟಡಗಳು

4916 - ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳೆಷ್ಟು? ಅವರು ಈಗ ಸರ್ಕಾರಿ ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ?

ಆ) ಎಷ್ಟು ಸರ್ಕಾರಿ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳು ನಡೆದಿವೆ ಅಥವಾ ಸರ್ಕಾರದ ಸ್ವಂತ ಕಟ್ಟಡಗಳೆಷ್ಟು?

ಇ) ಇನ್ನು ಬೇಕಾಗುವ ಅಂಗನವಾಡಿ ಕೇಂದ್ರಗಳ ಕಟ್ಟಡಗಳಿಗೆ ಅನುದಾನ ಬಿಡುಗಡೆ ಮಾಡಿದೆಯೇ? ಬಾಡಿಗೆ ಕಟ್ಟಡಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಬಂದಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಅನುದಾನವನ್ನು ಎಷ್ಟು ದಿನದಲ್ಲಿ ಬಿಡುಗಡೆ ಮಾಡಲಾಗುವುದು ? (ವಿವರ ನೀಡಿ)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) 244 ಹುದ್ದೆಗಳು, 88 ಕಾರ್ಯಕರ್ತೆಯರು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆ) 88

ಇ) 2000-2001ನೇ ಸಾಲಿನಲ್ಲಿ 2 ಕೇಂದ್ರಗಳನ್ನು ಕಟ್ಟಲು ಉದ್ದೇಶಿಸಲಾಗಿದೆ. ರೂ.1.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಬಾಡಿಗೆ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳು ನಡೆಯುತ್ತಿಲ್ಲ.

ಈ) ಉಳಿದ ಅಂಗನವಾಡಿ ಕಟ್ಟಡಗಳಿಗೆ ಹಂತ ಹಂತವಾಗಿ ಜಿಲ್ಲಾ ಪಂಚಾಯತ್‌ನ ವಿವಿಧ ಯೋಜನೆಗಳಿಂದ ಸಂಸತ್ ಸದಸ್ಯರ ನಿಧಿ ಮುಂತಾದವುಗಳಿಂದ ಹಣಪಡೆದು ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಸಂಸ್ಥೆಯು ಖರೀದಿಸಿದ ಬಸ್ಸುಗಳು

4917 - ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ